

ಆರಸೋವರ್ಗುರ್ ಅಷ್ಟೆ... ತಿಳಕೋ... ಎಲ್ಲಾ ಕೆಲ ದಿನಗಳ ಮಾಯೆ... ಅರ್ಥ ಮಾಡ್ಕೋ... ನಿಂಗೇನು ಒಳ್ಳೇದು ಅಂತ ನಂಗಿಂತ ಯಾರಿಗ್ಗೊತ್ತು? ನನ್ನ ಮಾತು ಕೇಳು ಇಷ್ಟಕ್ಕೂ ನೀನಾ ಲಕ್ಷಣವಾಗೇ ಇದ್ದಾಳೆ' ಎಂದರು ಅಧಿಕಾರವಾಣಿಯಿಂದ.

ಒಂದು ಕ್ಷಣ ಮೌನವಾಗುಳಿದ ಮಗ, 'ಸರಿ ನಾನು ಸ್ವಲ್ಪ ಯೋಚನೆ ಮಾಡಿ ಹೇಳ್ತೀನಿ' ಎಂದ. ಅಷ್ಟು ಮಾತು ಅವರ ಭರವಸೆಯನ್ನು ಪುಟಿದೆಬ್ಬಿಸಿತು. ಇವನನ್ನು ದಾರಿಗೆ ತರುವುದೇನೂ ಕಷ್ಟವಿಲ್ಲವೆನಿಸಿತು. ಹೊಸ ಹುರುಪಿನಿಂದ ನೀನಾ ಚೌಧರಿಯನ್ನು ಕಾಯ ತೊಡಗಿದರು. ಹತ್ತು ದಿನಕ್ಕೆ ಬರುತ್ತೇನಂದವಳು ಎಂಟೇ ದಿನಕ್ಕೆ ವಾಪಸ್ಸಾದಳು. ಆ ಸಂಜೆ ಅಭ್ಯಾಸದ ನಂತರ ಸಹಜ ಧ್ವನಿಯಲ್ಲಿ, 'ನೀನಾ ಏನಾಯ್ತು ನಿನ್ನ ಮದುವೆ ವಿಚಾರ?' ಎಂದರು.

'ಇಲ್ಲ, ಆಗಲಿಲ್ಲ' ಎಂದಳು. 'ಯಾಕೆ? ಗಂಡು ಒಪ್ಪಲಿಲ್ಲವಾ?' ಎಂದರು.

'ಒಪ್ಪಿದ್ದ. ನಾನೇ ಒಲ್ಲೆನೆಂದೆ' ಎಂದಳು ಸಹಜವಾಗಿ.

'ಅದೇನು? ಹುಡುಗ ಇಷ್ಟವಾಗಲಿಲ್ಲವೆ?' ಎಂದಾಗ,

'ಹುಡುಗ ಇಷ್ಟವಾಗುವ ಪ್ರಶ್ನೆ ಅಲ್ಲ. ಅವನೊಬ್ಬ ಎಂಜಿನಿಯರ್, ನೋಯ್ಡಾದಲ್ಲಿ, ಬೆಳಿಗ್ಗೆ ಹೊರಟರೆ ಸಂಜೇಗೋ ರಾತ್ರಿಗೋ ಮನೆಗೆ ಬರ್ತಾನೆ. ಅವನಮ್ಮ ಟೀಚರು. ಅವರ ಮನೇಲಿ ನನ್ನ ಸಂಗೀತಕ್ಕೆ ಯಾವ ಕಿಮ್ಮತ್ತಿದೆ? ಅವರ ಮುಂದೆ ನಾನು ಯಾವ ರಿಯಾಜ್ ಮಾಡಲಿ? ನನ್ನನ್ನು ಕೇಳುವವರು ಯಾರಿದ್ದಾರೆ ಅಲ್ಲಿ? ಅಲ್ಲಿ ಯಾವ ಗವಾಯಿಗಳನ್ನು ಹುಡುಕಿಕೊಂಡು ಓಡಾಡಲಿ? ಇವೆಲ್ಲ ಯೋಚನೆ ಬಂದು ಆ ಮದುವೆಯೇ ಬೇಡ ಅನ್ನಿಸಿತು. ಬೇಡ ಅಂದು ಬಿಟ್ಟೆ' ಎಂದಳು ಮ್ಲಾನವಾಗಿ. ತಮ್ಮ ರೊಟ್ಟಿ ಜಾರಿ ತುಪ್ಪಕ್ಕೇ ಬಿದ್ದಂತನ್ನಿಸಿತು ಗಾಯಕವಾಡರಿಗೆ. ತಕ್ಷಣವೇ ಉತ್ಸುಕರಾಗಿ, 'ನೀನಾ ಸಂಗೀತ ಸರಸ್ವತಿಯೆ... ನಿನ್ನನೊಂದು ಭಿಕ್ಷೆ ಕೇಳುತ್ತಿದ್ದೇನೆ. ನೀನು ದೊಡ್ಡ ಮನಸ್ಸು ಮಾಡಿ ಒಪ್ಪಿಕೊಳ್ಳಬೇಕು' ಎಂದರು.

'ಹೇಳಿ ಗುರುಗಳೇ. ನೀವು ಬೇಡಿಕೊಳ್ಳುವಂಥದ್ದು ನನ್ನಲ್ಲೇನೂ ಇಲ್ಲ' ಎಂದಳು ನಾಟಕೀಯವಾಗಿ. 'ನಿನ್ನ ಬಳಿ ಅಲ್ಲ... ನೀನೇ ಆ ಬಹುದೊಡ್ಡ ಉಪಾಧಿ. ನನ್ನ ಮನೆಯ ಗೃಹಲಕ್ಷ್ಮಿಯಾಗಿ ಘರಾಣದ ಸಂಗೀತ ಸರಸ್ವತಿಯಾಗಿ ನಾನು ಕಟ್ಟಿದ ಕಲಾ ಸಾಮ್ರಾಜ್ಯಕ್ಕೆ ಸಾಮ್ರಾಜ್ಞಿಯಾಗುಂತ ಕೇಳಿಕೊಳ್ಳುತ್ತೀನಿ' ಎಂದವರೇ ಅವಳ ಪ್ರಶ್ನಾರ್ಥಕ ಕೂಡುಹುಬ್ಬುಗಳನ್ನು